ವಾಹನವೇರಿ ಹೊರಟರೆ ಗಾಳಿಗೂ ಸಣ್ಣಗೆ ಭಯ ಹುಟ್ಟಿ ನಡುಗುತ್ತದೆ. ಸಮಾಧಿಗಳಲ್ಲಿ ಮಲಗಿದವರೊಮ್ಮೆ ಮಗ್ಗಲು ಬದಲಾಯಿಸುತ್ತಾರೆ.

ಪೇಟೆಬೀದಿಗಳಲ್ಲಿ ಮೈಮಾರಾಟದ ಮನೆಗಳಲ್ಲಿ ತಂದು ಸೇರಿಸಿದ ಪಂಜರದ ಹುಡುಗಿಯರಿಗೆ ಸಂಜೆಯೆಂದರೆ ಮುಗಿಯದ ಭಯ. ರಾತ್ರಿಯ ನೋವಿನ ನೂರುರಾಗಗಳ ಪಲ್ಲವಿ ಆರಂಭವಾಗುವುದೇ ಮುಸ್ಸಂಜೆಯಲ್ಲಿ. ಉಪ್ಪರಿಗೆಯ ಕಿಡಕಿಯೊಳಗಿಳಿವ ಮುದಿಸೂರ್ಯನ ಪೇಲವ ಕಿರಣಗಳು ಸಿಂಗಾರಗೊಳ್ಳುವ ಕನ್ನಡಿಯನ್ನು ದುರ್ಬಲವಾಗಿ ಸವರುತ್ತವೆ. ಒಡೆದ ತತ್ತಿಯ ದೋಸೆ, ಹುರಿದ ಮೀನುಗಳ ವಾಸನೆ ಹೊತ್ತು ಬರುವ ಗಾಳಿ ಆಸೆ ತುಂಬಿದ ದೇಹಗಳು ಬರುತ್ತಿರುವ ವರದಿ ನೀಡುತ್ತದೆ. ತಗ್ಗು ಮಾಡಿನ ಖೋಲಿಯಲ್ಲಿ ಮಲಗಿದ ಗೂರಲು ಮುದುಕ ಕೆಮ್ಮಿ, ಕೆಮ್ಮಿ ಸಾಕಾಗಿ ಬಾಗಿಲೆಡೆಗೆ ನೋಡುತ್ತಾನೆ. ಕೆಲಸ ಮುಗಿಸಿ ಬರುವ ಮಗಳು ಕಾಫ್ ಸಿರಪ್ ತರುತ್ತೇನೆಂದು ಹೇಳಿದ್ದನ್ನು ನೆನಪಿಸಿಕೊಂಡು ಅವನ ಸೋತ ಕಣ್ಣುಗಳು ಒಂದು ಗಳಿಗೆ ಫಳಫಳ ಹೊಳೆಯುತ್ತವೆ. ಆದರೂ ಅವನಿಗೆ ಕತ್ತಲೆಯ ಭಯ. ಕೆಮ್ಮು–ದಮ್ಮಿನಂತಹ ಮಹಾಮಾರಿ ರೋಗಗಳು ರಾತ್ರಿಯಾದೊಡನೆ ಉಲ್ಬಣಗೊಂಡು ಪ್ರಾಣ ಹಿಂಡುತ್ತವೆ.

ಮಹಾನಗರಗಳಲ್ಲಿ ಕಚೇರಿಗಳ ದುಡಿತ ಮುಗಿಸಿದ ಜನರು ಮೆಟ್ರೊ, ಬಸ್ಸುಗಳಲ್ಲಿ ತುಂಬಿಕೊಂಡು ನಿಂತಲ್ಲೇ ಕಿವಿಗಿರಿಸಿಕೊಂಡ ಸೆಲ್ ಫೋನುಗಳಲ್ಲಿ ತಲ್ಲೀನರಾಗಿರುತ್ತಾರೆ. ಮೈಗೆ ಮೈ ಹತ್ತುವಂತೆ ನಿಂತಿದ್ದರೂ ಪ್ರತಿಯೊಬ್ಬರೊಳಗೂ ಸುತ್ತಲಿನಿಂದ ತುಂಬ ದೂರವಾದ, ಪ್ರತ್ಯೇಕವಾದ ಮತ್ತು ಕೇವಲ ಅವರದ್ದಷ್ಟೇ ಆದ ಖಾಸಗಿ ಜಗತ್ತೊಂದು ಅರಳಿಕೊಂಡಿರುತ್ತದೆ. ಆದ್ದರಿಂದಲೇ ಅವರು ತಾವು ಇರುವ ಭೌತಿಕ ಸ್ಥಳದ ಸಂಗತಿಗಳು ತಮಗೆ ಇನಿತೂ ಸಂಬಂಧಿಸಿದ್ದಲ್ಲ ಎಂಬಂತೆ ಕಣ್ಣಿದ್ದೂ ಕುರುಡರಂತೆ, ಕಿವಿಯಿದ್ದೂ ಕಿವುಡರಂತೆ ದೂರ ತೀರದ ಅದೃಶ್ಯ ಕರೆಯೊಂದಿಗೆ ಲೀನವಾಗಿರುತ್ತಾರೆ. ಓಡುವ ವಾಹನಗಳ ಕಿಡಕಿಯಾಚೆಗೆ ಆಗಸ ಕೆಂಪಾಗಿದ್ದು, ಮೋಡಗಳೊಡಲು ಓಕುಳಿಯಾಡಿದ್ದು ಯಾರ ಕಣ್ಣಿಗೂ ಬೀಳುವುದೇ ಇಲ್ಲ. ಬಹುಮಹಡಿ ಅಪಾರ್ಟ್‌ಮೆಂಟುಗಳ ಕೊನೆಯಂತಸ್ತಿನ ಮಹಿಳೆ ಒಣ ಹಾಕಿದ ಬಟ್ಟೆ ತೆಗೆಯಲು ಟೆರೇಸಿಗೆ ಬಂದರೂ, ಕಿವಿಗಾನಿಸಿಕೊಂಡ ಮೊಬೈಲಿನಲ್ಲಿ ಅಕ್ಕನೊಂದಿಗೆ ಪಾಲಕ್ ಪನೀರ್ ರೆಸಿಪಿ ಹಂಚಿಕೊಳ್ಳುವುದರಲ್ಲಿ ಬ್ಯುಸಿಯಾಗಿರುವುದರಿಂದ ಅವಳ ಕಣ್ಣಿಗೂ ಮೇಲೆತ್ತಿ ಆಕಾಶ ನೋಡಲು ಪುರುಸೊತ್ತಿಲ್ಲ. ಆ ಗಳಿಗೆಯ ತನಕ ಗಾಳಿಯೊಂದಿಗೆ ಜೂಟಾಟವಾಡುತ್ತಿದ್ದ ನೈಟಿ, ಬನಿಯನ್ನುಗಳು ಪೆಚ್ಚಾಗಿ ಮುಖವೆತ್ತಿ ಸಣ್ಣಗೆ ಮೂಡುತ್ತಿರುವ ಚಂದಿರನಿಗೆ ಟಾಟಾ ಹೇಳುತ್ತವೆ.

ಕೈಯ ಕರಂಡಕದಲ್ಲಿ ತುಂಬಿದ ಕೆಂಡದ ಮೇಲೆ ಧೂಪದ ಪುಡಿ ಹಾಕಿದ್ದೇ ಭಗ್ಗನೆ ಮೇಲೆದ್ದ ಘಮದ ಹೊಗೆಯನ್ನು ಎಲ್ಲೆಡೆಯಲ್ಲಿಯೂ ತುಂಬಿಸುತ್ತ ಓಡಾಡುವ ಬಾರಿನ ಹುಡುಗ ಒಂದೊಂದೇ ಟೇಬಲ್ಲುಗಳು ಭರ್ತಿಯಾಗುತ್ತಿರುವುದನ್ನು ಓರೆಗಣ್ಣಿಂದ ಗಮನಿಸುತ್ತಾನೆ. ಇನ್ನೀಗ ಟೇಬಲ್ಲಿಗೂ, ಕಿಚನ್ನಿಗೂ ಓಡಾಡಲು ಒಂದು ಸಲ ಆರಂಭಿಸಿದರೆ ಮುಗಿಯಿತು, ನಡುರಾತ್ರಿಯ ತನಕವೂ ಕಾಲಿಗೆ ಚಕ್ರ ಕಟ್ಟಿಕೊಂಡಿರಬೇಕು. ಕೂರಲು ಒತ್ತಟ್ಟಿಗಿರಲಿ, ಸುಮ್ಮನೆ ನಿಲ್ಲಲು ಕೂಡ ಸಮಯವಿರುವುದಿಲ್ಲ. ಗರಗರ ತಿರುಗಾಟಕ್ಕೆ ಕಾಲುಗಳು, ತುಂಬಿದ ಟ್ರೇ ಹೊತ್ತೊಯ್ಯಲು ಕೈಗಳು, ಪಟಪಟನೆ ಮೆನು ಒದರಲಿಕ್ಕೆ ನಾಲಿಗೆ ಸಜ್ಜಾಗುತ್ತವೆ. ಆಗಷ್ಟೇ ಧರಿಸಿಕೊಂಡ ಸಮವಸ್ತ್ರದ ತಾಜಾ ವಾಸನೆಯ ಖಾಲಿ ಕಿಸೆಗೊಂದು ನಿಷ್ಪಾಪಿ ತಹತಹ ಹುಟ್ಟಿಕೊಳ್ಳುತ್ತದೆ. ಇಂದು ಎಷ್ಟು ಟಿಪ್ಸು ಸಿಕ್ಕಬಹುದು? ಜೇಬು ಎಷ್ಟರಮಟ್ಟಿಗೆ ಮಟ್ಟಿಗೆ ತುಂಬಬಹುದು? ನಾಳೆಯಾದರೂ ಮುದಿತಾಯಿಗೆ ಮನಿಯಾರ್ಡರು ಮಾಡಲು ಸಾಧ್ಯವಾಗಬಹುದೆ? ಈ ಸಲವಾದರೂ ಆಕೆಗೆ ಡಾಕ್ಟರ ಹತ್ತಿರ ಹೋಗಿ ಔಷಧಿ ಬರೆಸಿಕೊ ಎಂದು ಹೇಳಬೇಕು. ಅದೇನೋ ಟಾನಿಕ್ ಕುಡಿದರೆ ಮೈಯಲ್ಲಿ ರಕ್ತವಾಗುತ್ತದೆಯಂತೆ. ಒಂದು ಬಾಟಲಿ ಕೊಂಡುಬಿಡು ಅಂತ ಒತ್ತಾಯ ಮಾಡಬೇಕು.

ಮೂಲೆಯ ಟೇಬಲ್ಲಿಗೆ ಬಂದು, 'ಏಯ್ ವೇಟರ್' ಎಂದು ಅರಚಿದ ಗಿರಾಕಿಯ ಕರ್ಕಶ ಕೂಗಿನಿಂದ ಅವನ ವಿಚಾರ ಸರಣಿ ಕತ್ತರಿಸುತ್ತದೆ. ಈಗಲೇ ಅಲ್ಲಿಗೆ ಓಡಬೇಕು. ಇಲ್ಲಿಗೆ ಬರುವ ಯಾವ ಗಿರಾಕಿಗೂ